ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 22–09–2018**

# ಪತ್ರಿಕಾ ಆಮಂತ್ರಣ

1. ಕನ್ನಡ ಪುಸ್ತಕ ಪ್ರಾಧಿಕಾರ
ನಿಮ್ಮ ಮನೆಗೆ ನಮ್ಮ ಪುಸ್ತಕ:

ಅತಿಥೇಯರು:
ಡಾ: ಎಂ. ಚಿದಾನಂದಮೂರ್ತಿ, ಸಾಹಿತಿಗಳು.

ಪುಸ್ತಕಗಳೊಂದಿಗೆ:
ಡಾ: ವಸುಂಧರಾ ಭೂಪತಿ, ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ದಿನಾಂಕ: 24–09–2018 ಸೋಮವಾರ ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ಡಾ: ಎಂ. ಚಿದಾನಂದಮೂರ್ತಿಯವರ ಮನೆಯಂಗಳ, ಮಿಂಚು, 6/ಎ 4 ನೇ ಕ್ರಾಸ್, 11 ನೇ ಮುಖ್ಯ ರಸ್ತೆ, 2 ನೇ ಹಂತ, ವಿಜಯನಗರ, (ಹಂಪಿ ನಗರ) ಬೆಂಗಳೂರು – 560 040.

2. ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಅಧ್ಯಕ್ಷರು ಮತ್ತು ವ್ಯವಸ್ಥಾಪಕರುಗಳ ರಾಜ್ಯ ಮಟ್ಟದ ಸಮ್ಮೇಳನ :

ಉದ್ಘಾಟನೆ:
ಹೆಚ್. ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:
ಬಂಡೆಪ್ಪ ಖಾಶೆಂಪುರ,
ಸಹಕಾರ ಸಚಿವರು

ದಿನಾಂಕ: 24–09–2018 ಸೋಮವಾರ ಮಧ್ಯಾಹ್ನ 3–00 ಗಂಟೆಗೆ

ಸ್ಥಳ: ಡಾ: ಬಿ.ಎಸ್. ವಿಶ್ವನಾಥನ್ ಸಭಾಂಗಣ, ಕರ್ನಾಟಕ ರಾಜ್ಯ ಸಹಕಾರಿ ಕೃಷಿ
ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಟಿಪ್ಪು ಸುಲ್ತಾನ್
ಅರಮನೆ ರಸ್ತೆ, ಚಾಮರಾಜಪೇಟೆ, ಕೋಟೆ, ಬೆಂಗಳೂರು –560 018

**ಸಂಖ್ಯೆ:1024/1124**

**ಪತ್ರಿಕಾ ಪ್ರಕಟಣೆ**

# ವಲಯವಾರು ಕೃಷಿ ನೀತಿ ಶೀಘ್ರದಲ್ಲಿ ಜಾರಿ

**– ಸಚಿವ ಎನ್. ಎಚ್. ಶಿವಶಂಕರ್ ರೆಡ್ಡಿ**

ಬೆಂಗಳೂರು, ಸೆಪ್ಟೆಂಬರ್ 22 (ಕರ್ನಾಟಕ ವಾರ್ತೆ)

**ರಾಜ್ಯದಲ್ಲಿ ಕೃಷಿಯನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ವಲಯವಾರು ಕೃಷಿನೀತಿ ಜಾರಿ ತರಲು ಯೋಜಿಸಲಾಗುತ್ತಿದೆ ಎಂದು ಕೃಷಿ ಸಚಿವ ಎನ್.ಎಚ್. ಶಿವಶಂಕರ್ ರೆಡ್ಡಿ ಅವರು ತಿಳಿಸಿದರು.**

ಜಲಾನಯನ ಅಭಿವೃದ್ಧಿ ಇಲಾಖೆಯ ಸುಜಲ – III ಯೋಜನೆಯಡಿ ಭೂ ಸಂಪನ್ಮೂಲ ಮಾಹಿತಿ ಪಾಲುದಾರರ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರದೇಶಕ್ಕನುಗುಣವಾದ ಬೆಳೆಗಳನ್ನು ಬೆಳೆಯಲು ರೈತರಿಗೆ ಅರಿವು ಮೂಡಿಸುವ ಹಾಗೂ ನೀರಿನ ಸದ್ಬಳಕೆ ಬಗ್ಗೆ ಹೆಚ್ಚಿನ ಒತ್ತನ್ನು ನೀಡುವ ಉದ್ದೇಶದಿಂದ ಕೃಷಿಗೆ ಅಗತ್ಯವಿರುವ ಅಂಶಗಳನ್ನು ಒಳಗೊಂಡ ಕೃಷಿನೀತಿಯನ್ನು ಜಾರಿಗೆ ತರಲಾಗುವುದು ಎಂದು ಹೇಳಿದರು.–

ಕೃಷಿಗಾಗಿ ದುಡಿಯುತ್ತಿರುವ ಹಾಗೂ ರಾಜ್ಯದಲ್ಲಿ ನೆಲೆಸಿರುವ ಕೃಷಿ ಸಂಸ್ಥೆಗಳ ಸಂಶೋಧನೆಗಳನ್ನು ಸರ್ಕಾರದ ಮಟ್ಟದಲ್ಲಿ ಅಧ್ಯಯನ ನಡೆಸಿ ಹಾಗೂ ಸಂಸ್ಥೆಗಳೊಂದಿಗೆ ಸಭೆ ನಡೆಸಿ ರಾಜ್ಯದಲ್ಲಿ ಕೃಷಿಗೆ ಸಂಬಂಧಿಸಿದ ಅತ್ಯುತ್ತಮ ಯೋಜನೆಗಳನ್ನು ಜಾರಿಗೆ ತರಲು ಚಿಂತನೆ ನಡೆಸಲಾಗಿದೆ.

ಜಲಾನಯನ ಅಭಿವೃದ್ಧಿ ಇಲಾಖೆ ವಿಶ್ವಬ್ಯಾಂಕ್ ನೆರವಿನೊಂದಿಗೆ ಹಮ್ಮಿಕೊಂಡಿರುವ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ – II (ಸುಜಲ – III) 2013-14 ನೇ ಸಾಲಿನಿಂದ 527.70 ಕೋಟಿ ರೂ. ಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಐದು ವರ್ಷಗಳ ಯೋಜನೆಯಡಿಯಲ್ಲಿ ರಾಜ್ಯದ 11 ಜಿಲ್ಲೆಗಳಾದ ಚಾಮರಾಜನಗರ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ರಾಯಚೂರು, ಕೊಪ್ಪಳ, ಕಲಬುರಗಿ, ಯಾದಗಿರಿ, ಗದಗ, ಬೀದರ್ ಹಾಗೂ ವಿಜಯಪುರ ಜಿಲ್ಲೆಗಳ ಆಯ್ದ 2531 ಕಿರು ಜಲಾನಯನಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

**ಯೋಜನೆಯ ಯಶಸ್ಸಿನ ಆಧಾರದ ಮೇಲೆ ಭವಿಷ್ಯದಲ್ಲಿ ವಿಶ್ವಬ್ಯಾಂಕ್ ಸಹಾಯ ಮತ್ತೆ ಸಿಕ್ಕಲ್ಲಿ ರಾಜ್ಯದ ಇತರೆ ಜಿಲ್ಲೆಗಳಿಗೂ ಸಹ ಈ ಯೋಜನೆಯನ್ನು ವಿಸ್ತರಿಸುವ ಕುರಿತು ಸರ್ಕಾರ ಉತ್ಸುಕವಾಗಿದೆ ಎಂದು ಹೇಳಿದರು.**

**ಕೃಷಿ ಇಲಾಖೆಯ ಕಾರ್ಯದರ್ಶಿ ಎಂ ಮಹೇಶ್ವರ್ ರಾವ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಇಂದಿನ ಕಾರ್ಯಾಗಾರದ ಬಗ್ಗೆ ಮಾಹಿತಿ ಹಂಚಿಕೊಂಡರು.**

**ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಕಾರ್ಯದರ್ಶಿ ಎಂ. ವೆಂಕಟೇಶ್ವರ ರಾವ್, ನಿರ್ದೇಶಕ ಬಿ.ವೈ. ಶ್ರೀನಿವಾಸ್, ಸುಜಲ ಯೋಜನೆಯ ನಿರ್ದೇಶಕರ ಪ್ರಭಾಸ್‌ಚಂದ್ರ ರೇ ಹಾಗೂ ಬಾಗಲಕೋಟೆ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಕೆ. ಇಂದ್ರೇಶ್ ಅವರು ಉಪಸ್ಥಿತರಿದ್ದರು.**

**ಕಾರ್ಯಾಗಾರದಲ್ಲಿ ಭೂ ಸಂಪನ್ಮೂಲ ಮಾಹಿತಿಯ ಪಾಲುದಾರ ಸಂಸ್ಥೆಗಳು, ಇಲಾಖಾಧಿಕಾರಿಗಳು ಹಾಗೂ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಲಹೆಗಾರರು, ರೈತರು, ಕೃಷಿ ತಜ್ಞರು ಭಾಗವಹಿಸಿದ್ದರು.**

**ಸಂಖ್ಯೆ:1025/1125**

# <u>ಕಬ್ಬನ್ ಉದ್ಯಾನವನದಲ್ಲಿ ಈ ಭಾನುವಾರ</u>

ಬೆಂಗಳೂರು, ಸೆಪ್ಟೆಂಬರ್ 22 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಯಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ.

ದಿನಾಂಕ: 23-09-2018 ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿ-ಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂ ಸಾರಿಗೆ

ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ:**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಕು. ಸಂದ್ಯಾ ಮುರಳೀಧರನ್ ರವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**ಸಂಖ್ಯೆ:1026/1126**

## *ಕೊಡಗು ನೆರೆಸಂತ್ರಸ್ತರಿಗೆ ಸಿಎಂ ಪರಿಹಾರ ನಿಧಿ ಮೂಲಕ ನೆರವು*

## 50 ಸಾವಿರ ರೂ. ಹೆಚ್ಚಿನ ಪರಿಹಾರ: ದೇಶಪಾಂಡೆ

**ಬೆಂಗಳೂರು, ಸೆಪ್ಟೆಂಬರ್ 22 (ಕರ್ನಾಟಕ ವಾರ್ತೆ)**

**ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಬಿದ್ದ ಭಾರೀ ಮಳೆಗೆ ಸಿಲುಕಿ ಹಾನಿಗೊಳಗಾಗಿರುವ ಕುಟುಂಬಗಳಿಗೆ ಬಟ್ಟೆ ಬರೆ ಮತ್ತು ಅಗತ್ಯ ದಿನಬಳಕೆ ವಸ್ತುಗಳಿಗೆಂದು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ 50 ಸಾವಿರ ರೂ. ಹೆಚ್ಚುವರಿ ಪರಿಹಾರ ಕೊಡಲು ಸರಕಾರ ತೀರ್ಮಾನಿಸಿದೆ ಎಂದು ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್.ವಿ.ದೇಶಪಾಂಡೆ ಹೇಳಿದ್ದಾರೆ.**

**ಈ ಬಗ್ಗೆ ಶನಿವಾರ ಪತ್ರಿಕಾ ಹೇಳಿಕೆ ನೀಡಿರುವ ಸಚಿವರು, `` ಪ್ರಕೃತಿ ವಿಕೋಪದಿಂದ ಹಾನಿ ಹೊಂದಿರುವ ಮನೆಗಳಿಗೆ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ಮಾರ್ಗಸೂಚಿಯ ಪ್ರಕಾರ ಬಟ್ಟೆ ಬರೆ ನೆರವಿಗೆಂದು 1,800 ರೂ. ಮತ್ತು ದಿನಬಳಕೆವಸ್ತುಗಳಿಗೆಂದು 2,000/- ರೂ. ಮಾತ್ರ(ಒಟ್ಟು 3,800/- ಮಾತ್ರ) ಕೊಡಲು ಅವಕಾಶವಿದೆ. ಆದರೆ, ಇದು ಸಾಕಾಗುವುದಿಲ್ಲ ಎನ್ನುವ ಹಿನ್ನೆಲೆಯಲ್ಲಿ ಈಗ ಈ ಕ್ರಮಕೈಗೊಳ್ಳಲಾಗಿದೆ,'' ಎಂದು ವಿವರಿಸಿದ್ದಾರೆ.**

**``ಕೊಡಗಿಗೆ ತಾವೂ ಸೇರಿದಂತೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅನೇಕ ಸಚಿವರು ಇತ್ತೀಚೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಪರಿಹಾರ ಮೊತ್ತವನ್ನು ಹೆಚ್ಚಿಸಬೇಕೆಂದು ಸಂತ್ರಸ್ತರು ಮನವಿ ಮಾಡಿಕೊಂಡಿದ್ದರು. ಅವರ**

ಮನವಿಗೆ ಸ್ಪಂದಿಸಿ ಈ ಕ್ರಮಕೈಗೊಂಡಿದ್ದು, ಇದಕ್ಕೆ ಸಚಿವ ಸಂಪುಟದ ಒಪ್ಪಿಗೆಯೂ ದೊರೆತಿದೆ,'' ಎಂದು ದೇಶಪಾಂಡೆ ಹೇಳಿದ್ದಾರೆ.

``ಕೊಡಗಿನಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಗೆ 1,156 ಮನೆಗಳು ತೀವ್ರಹಾನಿಗೊಳಗಾಗಿವೆ. ಇಷ್ಟೂ ಕುಟುಂಬಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ 50 ಸಾವಿರರೂ. ಪರಿಹಾರ ನೀಡಲಾಗುವುದು. ಇದಕ್ಕಾಗಿ 5.78 ಕೋಟಿರೂ. ವೆಚ್ಚವಾಗಲಿದೆ,'' ಎಂದು ಕಂದಾಯ ಸಚಿವರು ತಿಳಿಸಿದ್ದಾರೆ.

## State Level LRI Stake Holder Workshopunder

## KWDP II (Sujala-III)

Watershed Development Department is implementing Karnataka Watershed Development Project-II (Sujala-3) from 2012-13 with the World Bank assistance with the allocation of Rs.527.70 crores. 70% is the World Bank loan and 30% is the State Government fund.The project is being implemented till December 2018in the selected 2531 microwatersheds located in 11 project districts viz., Bidar, Kalaburagi, Yadagir, Raichur, Koppal, Vijayapura,Gadag, Davanagere, Tumkur and Chamarajanagara. Of the total project cost Rs.110.66 crores has been allocated to Horticulture component which is being implemented by the Department of Horticulture.

**The Project Development Objective (PDO)** is to demonstrate more effective watershed management through greater integration of programmes related to rainfed agriculture, innovative and science based approaches, and strengthened institutions and capacities of stakeholders at different levels.

The project has generated scientific data on Land Resource Inventory (LRI), Hydrological Aspects, Baseline Data, Weather Data etc. The scientific data generated is useful many other departments like Agriculture, Horticulture, Forestory, Sericulture, Fisheries, Livestock and many more line departments. This information is going to be placed inDigital Library, Decision Support System (DSS) and Land Resource Inventory Portal, for the benefit of farmers and also for better planning and implementation of schemes by the line departments.

Land Resource Inventory (LRI) investigations being done through Universities of Agriculture/Horticulture Sciences over 13.28 lakhs hectares of rainfedareas of 2531 micro-watersheds in the 46 taluks of 11 districts is generating data and after analysis recommendations are given to line department to affectively plan their programmes including Watershed Development Departments to plan effective Watershed Wise Development Plan, Agriculture Department for Crop Planning, Seed and Fertilizer Distribution Planning, Horticulture Department to plan their programmes and likewise.

The LRI information's will help farmers to plan conservation structures, crop selection, crop management, nutrient management and finally to improve crop productivity with less investment while improving soil health and maintaining sustainability of their farming system.

To create awareness about the usefulness of LRI and Hydrology information for line departments today on 22nd September, 2018 Watershed Development Department conducted state level LRIstake holder workshop at The Capital hotel. Workshop commenced by welcome address of Sri, Prabhash Chandra Ray I.F.S. Project Director, KWDP-II (Sujala-III) and Commissioner, Watershed Development Department and Hon'ble Agriculture Minister Sri, N.H. Shivashankar Reddyinaugurated by lighting the lamp. He expressed that this project is very much useful to farmers for increasing their income by utilizing scientific data generated. Therefore, he assured that the project will be extended to all other districts of State either by World Bank funds or State funds in forth coming days.

The Secretary to Department of Agriculture briefed about the project. The Director of Horticulture Sri, Y.S. Patil, Sri, K.M. Indresh, Vice Chancellor, UHS Bagalkot, The Environmental Specialist, World Bank Mr. Rajashekar, the Director of Agriculture, Sri, B.Y. Srinivas, the Director of Watershed Dr. A. PadmayaNaika and Sri, Ajay Mishra I.F.S, P.C.C.F, Forest Department witnessed the inaugural session.The farmers from project districts, LRI partners, NGO's, Private Partners and Departmental Officers were also present in the workshop.**The LRI Field Guide in Kannada and LRI Technical Manual in English along with LRI Card**were released and distributed to farmers by Hon'bleAgriculture Minister and other dignitaries present in the inaugural session.

After inaugural different technical sessions related to LRI, Hydrology and Establishment of Digital Library are presented and held discussions in the workshop.The workshop comes to an end by vote of thanks by the Director, Watershed Development Department.